C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.2/2024 ಪಿ.ಡಬ್ಲ್ಯೂ-6 ಸಿ.ಡಬ್ಲ್ಯೂ-4

ದಿನಾಂಕಃ- 09.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬೆಟ್ಟಯ್ಯ |
| ತಂದೆಯ ಹೆಸರು | ಮೂಡಯ್ಯ |
| ವಯಸ್ಸು | 51 ವರ್ಷ |
| ಉದ್ಯೋಗ | ಗ್ರಾಮ ಸಹಾಯಕ,<br>ಪಾಲಹಳ್ಳಿ ವೃತ್ತ ,<br>ಶ್ರೀರಂಗಪಟ್ಟಣ ತಾಲ್ಲೂಕು. |
| ವಾಸ | ಪಾಲಹಳ್ಳಿ<br>ಶ್ರೀರಂಗಪಟ್ಟಣ ತಾಲ್ಲೂಕು. |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು ಕಳೆದ 30 ವರುಷಗಳಿಂದ ಪಾಲಹಳ್ಳಿ ವೃತ್ತದ ಗ್ರಾಮ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ.

2. 2023 ಏಪ್ರಿಲ್ ತಿಂಗಳಿನಲ್ಲಿ ಶ್ರೀರಂಗಪಟ್ಟಣ ಅಬಕಾರಿ ವಲಯ ಕಛೇರಿಯಲ್ಲಿ ರಮ್ಯಾ.ಹೆಚ್.ಡಿ ರವರು ಅಬಕಾರಿ ನಿರೀಕ್ಷಕರಾಗಿ ಕೆಲಸ ಮಾಡಿದ್ದಾರೆ.

3. ದಿಃ 19.04.2023 ರಂದು ಶ್ರೀರಂಗಪಟ್ಟಣ ವಲಯದ ಅಬಕಾರಿ ನಿರೀಕ್ಷಕರಾದ ರಮ್ಯಾರವರು ಪಂಚರಾಗಿ ಕೆಲಸ ಮಾಡುವಂತೆ ನನಗೆ ನಿಪಿ-8 ರಲ್ಲಿ ಗುರುತಿಸಿರುವ ನೋಟೀಸನ್ನು ಕೊಟ್ಟರು. ಆನಂತರ ನಾನು ಅಬಕಾರಿ ನಿರೀಕ್ಷಕರಾದ ರಮ್ಯಾರವರು ಮಧುಸೂದನ ಮತ್ತು ಗಿರೀಶ ರವರ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ

ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಕರೆದುಕೊಂಡು ಹೋದರು.

4. ದಿಃ 19.04.2023 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುವುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು. ಸ್ಥಳದಲ್ಲಿ ಇದ್ದ ನಾಗೇಂದ್ರ ಮತ್ತು ಗಿರೀಶ ರವರನ್ನು ವಿಚಾರಿಸಿದಾಗ ಗಾಂಜಾ ಗಿಡಗಳನ್ನು ಬೆಳೆಸಲು ಪರವಾನಗಿ ಇಲ್ಲ ಎಂದು ಹೇಳಿದರು. ಆನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ರಮ್ಯಾ ರವರು ಕೀಳಿಸಿದರು. ಸ್ಥಳದಲ್ಲಿ ಸಿಕ್ಕಿದ ಮತ್ತು ಕಿಳಿಸಿದ 25 ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ನಿಪಿ-4 ರಲ್ಲಿ ಗುರುತಿಸಿರುವ ಮಹಜರು ಬರೆದು ರಮ್ಯಾ ರವರು ವಶಪಡಿಸಿಕೊಂಡರು. ರಮ್ಯಾ ರವರು ಸ್ಥಳದಲ್ಲಿ ಸಿಕ್ಕಿದ ನಾಗೇಂದ್ರ ಮತ್ತು ಗಿರೀಶ ರವರನ್ನು ಹಿಡಿದುಕೊಂಡು ಸಿಬ್ಬಂದಿಯ ಜೊತೆಯಲ್ಲಿ ನಮ್ಮ ಕಛೇರಿಗೆ ವಾಪಸ್ಸು ಬಂದರು.

5. ರಮ್ಯಾ ರವರು ತಯಾರಿಸಿದ ನಿಪಿ-4 ರಲ್ಲಿ ಗುರುತಿಸಿರುವ ಮಹಜರಿನ ಮೇಲೆ ನಾನು ಸಹಿ ಮಾಡಿದ್ದೇನೆ. ಈ ಸಾಕ್ಷಿ ನಿಪಿ-4 ರಲ್ಲಿ ಗುರುತಿಸಿರುವ ಮಹಜರಿನಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಮಹಜರಿನಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು ನಿಪಿ-4(ಇ) ಎಂದು ಗುರುತಿಸಲಾಯಿತು. ಈ ಸಾಕ್ಷಿ ನಿಪಿ-8 ರಲ್ಲಿ ಗುರುತಿಸಿರುವ ನೋಟೀಸಿನಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ನೋಟೀಸಿನ ಮೇಲೆ ಇರುವ ಈ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು.

6. ಈಗ ನ್ಯಾಯಾಲಯದಲ್ಲಿ ಹಾಜರಿರುವ ಇಬ್ಬರು ಆರೋಪಿತರನ್ನು ದಿಃ 19.04.2023 ರಂದು ಮಧ್ಯಾಹ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮ ಸ.ನಂ. 273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದ ಜಾಗದಲ್ಲಿ ಅಬಕಾರಿ ನಿರೀಕ್ಷಕರಾದ ರಮ್ಯಾರವರು ನನ್ನ ಸಮಕ್ಷಮ ಹಿಡಿದಿದ್ದರು.

7. ಮೇಲೆ ಹೇಳಿದ ವಿಚಾರಗಳ ಕುರಿತು ಅಬಕಾರಿ ಇಲಾಖೆಯ ಅಧಿಕಾರಿಗಳು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ.

ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ . ಸಿ ಮೂರ್ತಿ ವಕೀಲರಿಂದಃ-

1. ದಿಃ 19.04.2023 ರಂದು ಶ್ರೀರಂಗಪಟ್ಟಣ ವಲಯದ ಅಬಕಾರಿ ನಿರೀಕ್ಷಕರಾದ ರಮ್ಯಾ ರವರು ನನ್ನನ್ನು, ಪಂಚರಾದ ಮಧುಸೂದನ ಮತ್ತು ಗಿರೀಶ ರವರ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಕರೆದುಕೊಂಡು ಹೋದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

2. ದಿಃ 19.04.2023 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುವುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು, ಸ್ಥಳದಲ್ಲಿ ಇದ್ದ ನಾಗೇಂದ್ರ ಮತ್ತು ಗಿರೀಶ ರವರನ್ನು ವಿಚಾರಿಸಿದಾಗ ಗಾಂಜಾ ಗಿಡಗಳನ್ನು ಬೆಳೆಸಲು ಪರವಾನಗಿ ಇಲ್ಲ ಎಂದು ಹೇಳಿದರು, ಆನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ರಮ್ಯಾ ರವರು ಕೀಳಿಸಿದರು. ಸ್ಥಳದಲ್ಲಿ ಸಿಕ್ಕಿದ ಮತ್ತು ಕಿಳಿಸಿದ 25 ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ನಿಪಿ-4 ರಲ್ಲಿ ಗುರುತಿಸಿರುವ ಮಹಜರು ಬರೆದು ರಮ್ಯಾ ರವರು ವಶಪಡಿಸಿಕೊಂಡರು, ರಮ್ಯಾ ರವರು ಸ್ಥಳದಲ್ಲಿ ಸಿಕ್ಕಿದ ನಾಗೇಂದ್ರ ಮತ್ತು ಗಿರೀಶ ರವರನ್ನು ಹಿಡಿದುಕೊಂಡು ಸಿಬ್ಬಂದಿಯ ಜೊತೆಯಲ್ಲಿ ತಮ್ಮ ಕಛೇರಿಗೆ ವಾಪಸ್ಸು ಬಂದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

3. ನಾನು ಅಬಕಾರಿ ಇಲಾಖೆಯ ಅದಿಕಾರಿಗಳ ಕಛೇರಿಯಲ್ಲಿ ನಿಪಿ-4(ಇ) ರಲ್ಲಿ ಗುರುತಿಸಿರುವ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

4. ನಾನು ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳು ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎನ್ನುವುದು ಸರಿಯಲ್ಲ. ನಾನು ಈಗ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.